ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4009
ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್
ಉತ್ತರಿಸಬೇಕಾದ ದಿನಾಂಕ : 04–7–2005
ಉತ್ತರಿಸುವ ಸಚಿವರು : ಶ್ರೀ ಡಿ. ಟಿ. ಜಯಕುಮಾರ್
ಮಾನ್ಯ ಪ್ರವಾಸೋದ್ಯಮ ಸಚಿವರು

	ಪ್ರಶ್ನೆ	ಉತ್ತರ
ಅ	ಮಲೈ ಮಹದೇಶ್ವರ ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಲಾಗಿದೆಯೇ;	ಪ್ರವಾಸೋದ್ಯಮ ಇಲಾಖೆಯು ಮಲೈ ಮಹದೇಶ್ವರ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸ ಲಾಗಿದೆ.
ಆ	ಮಲೈ ಮಹದೇಶ್ವರ ದೇವಸ್ಥಾನ ದಲ್ಲಿ ನೀರಿನ ಕೊರತೆಯನ್ನು ನಿವಾರಿಸಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು;	ಶ್ರೀ ಮಲೈಮಹದೇಶ್ವರಸ್ವಾಮಿ ದೇವಾಲಯಕ್ಕೆ ಶಾಶ್ವತ ಕುಡಿಯುವ ನೀರಿನ ಬಗ್ಗೆ ಮುಜರಾಯಿ ಇಲಾಖೆಯು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ತಯಾರಿಸಿ ಕೊಟ್ಟಿರುವ ರೂ. 11.50 ಕೋಟಿಗಳ ಅಂದಾಜು ಪಟ್ಟಿಗೆ ಕರ್ನಾಟಕ ಸರ್ಕಾರದ ನಡವಳಿ ಆದೇಶ ಸಂಖ್ಯೆ : ಕಂಇ 22 ಮುಅಕಾ 2001, ದಿ: 30–8–2002ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಇದಕ್ಕೆ ಭರಿಸಬಹುದಾದ ವೆಚ್ಚದ ಪೈಕಿ ರೂ. 3.50 ಕೋಟಿಗಳನ್ನು ದೇವಸ್ಥಾನದ ನಿಧಿಯಿಂದ ಭರಿಸಿಕೊಂಡು ಉಳಿದ ಮೊತ್ತ ರೂ. 8.00 ಕೋಟಿಗಳನ್ನು ಸರ್ಕಾರದ ಖಾತ್ರಿ ಮೇರೆಗೆ ಹುಡ್ಕೋದಿಂದ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿಯ ಮಂಡಳಿಯು ಸಾಲ ಪಡೆದು

	ಪ್ರಶ್ನೆ	ಉತ್ತರ
		ಒದಗಿಸಲು ಆದೇಶಿಸಿದೆ. ಕಾಮಗಾರಿಯನ್ನು ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯವರೇ ನಿರ್ವಹಿಸುತ್ತಿರುತ್ತಾರೆ. ಈಗಾಗಲೇ ಕಾಮಗಾರಿ ಪ್ರಾರಂಭಿಸಲಾಗಿದ್ದು, ಈ ಪೈಕಿ ಕರ್ನಾಟಕ ನೀರು ಶುದ್ಧೀಕರಣ ಕಾರ್ಯಗಾರ ಹಾಗೂ ಓವರ್ ಹೆಡ್ ಟ್ಯಾಂಕ್ ಹಾಗೂ ಇತರೆ ಸಿವಿಲ್ ಕಾಮಗಾರಿಗಳು ಪ್ರಗತಿ ಯಲ್ಲಿವೆ. ಜಾಕ್‌ವೆಲ್ ತೆಗೆಯಲು ಹಾಗೂ ಪೈಪ್‌ಲೈನ್ ಅಳವಡಿಸಲು ವನ್ಯಜೀವಿ ಸಂರಕ್ಷಣೆ ಮತ್ತು ರಿಸರ್ವ್ ಫಾರೆಸ್ಟ್‌ಗೆ ಸಂಬಂಧಪಟ್ಟ ಇಲಾಖೆ ಅನುಮತಿ ನೀಡದ ಕಾರಣ ಪ್ರಸ್ತಾವನೆ ಬಾಕಿ ಇದೆ.

ಪ್ರಶ್ನೆಯ ಸಂಖ್ಯೆ: 4009

ಉತ್ತರ ಲಗತ್ತಿಸಿದೆ

ಶ್ರೀ ವಾಟಾಳ್‌ನಾಗರಾಜ: ಮಾನ್ಯ ಉಪಾಧ್ಯಕ್ಷರೆ, ಉತ್ತರದಲ್ಲಿ ಪ್ರವಾಸೋದ್ಯಮ ಇಲಾಖೆಯ ಮಹದೇಶ್ವರ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗಿದೆಯೆಂದು ಹೇಳಿದ್ದಾರೆ. ಅಲ್ಲಿ ನೀವು ಗುರುತಿಸಿದ್ದೀರ ಅಷ್ಟೇ, ನಿಮ್ಮ ಪ್ರವಾಸೋದ್ಯಮ ಇಲಾಖೆಗೆ ಕೊಡತಕ್ಕ ಸವಲತ್ತುಗಳನ್ನೇನು ಅಲ್ಲಿ ಕೊಟ್ಟಿಲ್ಲ. ಉದಾಹರಣೆಗೆ ಹೋಟೆಲ್. ನಿಮ್ಮ ಮಯೂರ ಎಂದು ಅನೇಕ ಕಡೆ ಮಾಡಿದ್ದೀರಲ್ಲಾ ಆ ಹೋಟೆಲ್ ಅಲ್ಲಿ ಇಲ್ಲ. ಹೋಟೆಲ್‌ನ್ನು ಕೊಡುವಾಗ ಈಗಿನ ಪ್ರಕಾರ ಇವರು ಕೊಡತಕ್ಕ ಹೋಟೆಲ್ ಏನಿದೆ ಅದನ್ನು ತಮಗೆ ಹೇಳಿಬಿಡುತ್ತೇನೆ. ಅನಂತರ ಉತ್ತರ ಕೊಡಿ. ಒಂದು ಇವರ ಹೋಟೆಲ್‌ನಲ್ಲಿ ಹಂದಿ, ನಾಯಿ, ಹೆಗ್ಗಣ ತಿನ್ನತಕ್ಕಂಥ, ಅವೂ ಸಹ ತಿನ್ನಲು ಆಗುವುದಿಲ್ಲ, ಮಯೂರ ಹೋಟೆಲ್ ಏನಿದೆ ಇಡೀ ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯ ಈ ಹೋಟೆಲ್ ಏನಿದೆ

ಈ ಹೋಟೆಲ್‌ಗಳಲ್ಲಿ ಕೊಡತಕ್ಕಂಥ ತಿಂಡಿ, ಕಡುಬಿರಬಹುದು, ದೋಸೆ ಇರಬಹುದು, ಬ್ರೆಡ್ ಇರಬಹುದು, ಅನ್ನಾ ಸಾಂಬಾರ್ ಇರಬಹುದು, ಇದನ್ನು ಹಂದಿ ತಿನ್ನಲು ಆಗುವುದಿಲ್ಲ, ನಾಯಿ ತಿನ್ನಲು ಆಗುವುದಿಲ್ಲ ಹೆಗ್ಗಣಗಳೂ ತಿನ್ನಲು ಆಗುವುದಿಲ್ಲ, ಈ ಪರಿಸ್ಥಿತಿ ಇದೆ, ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಮನುಷ್ಯರು ತಿನ್ನತಕ್ಕಂಥ ವ್ಯವಸ್ಥೆ ಮಾಡತಕ್ಕ ಉದ್ದೇಶ ತಮಗೆ ಇದೆಯೆ? ತಾವು ಎಲ್ಲಾದರು ಇಡೀ ರಾಜ್ಯದಲ್ಲಿರತಕ್ಕಂಥ ಮಯೂರಾ ಹೋಟೆಲ್‌ಗಳಲ್ಲಿ ದೋಸೆಯನ್ನೇನಾದರು ತಿಂದಿದ್ದೀರಾ? ಕಡುಬನ್ನು ತಿಂದಿದ್ದೀರಾ? ಅನ್ನಾ ಸಂಬಾರ್ ತಿಂದಿದ್ದೀರಾ? ನಾನು ಒಂದು ಸಲ ತಿನ್ನಲು ಹೋಗಿ ತಿನ್ನಬಾರದು ಎಂದು ಹಿಂದಕ್ಕೆ ಬಂದಿದ್ದೇನೆ, ಈ ವ್ಯವಸ್ಥೆಯನ್ನೇನಾದರೂ ತಾವು ಸರಿಪಡಿಸಿ ಮನುಷ್ಯರು ತಿನ್ನತಕ್ಕಂಥ ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ? ಅಂಥ ಹೋಟೆಲ್‌ಅನ್ನು ಮಹದೇಶ್ವರ ಬೆಟ್ಟಕ್ಕೆ ತಾವು ಕೊಡುತ್ತೀರಾ?

ಶ್ರೀ ಡಿ.ಟಿ.ಜಯಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಸನ್ಮಾನ್ಯ ವಾಟಾಳ್ ನಾಗರಾಜ್‌ರವರ ಅನುಭವ ಏನಿದೆಯೋ, ಅದು ನಮಗೂ ಕೂಡ ಆಗಿದೆ. ಅವರು ಹೇಳುತ್ತಿರತಕ್ಕಂಥ ಮಾತಿನಲ್ಲಿ ಸತ್ಯ ಇದೆ. ಸರ್ಕಾರ ಯಾವುದೇ ಉದ್ದಿಮೆಗಳನ್ನು ಎಷ್ಟೇ ಚೆನ್ನಾಗಿ ನೋಡಿ ಕೊಂಡು, ಎಷ್ಟೇ ಚೆನ್ನಾಗಿ ಮಾಡಬೇಕೆಂದರೂ ಕೂಡ ಕೆಲವು ಲೋಪದೋಷಗಳು ಇರುತ್ತವೆ. ನಮ್ಮ ಡಿಪಾರ್ಟ್‌ಮೆಂಟಿನ ಕೆ.ಎಸ್.ಟಿ.ಡಿ.ಸಿ.ಗೆ ಸೇರಿದಂತಹ ಸುಮಾರು 18 ಹೋಟೆಲ್‌ಗಳನ್ನು ನಾವು ಈಗಾಗಲೇ ONGCಗೆ hand over ಮಾಡಿದ್ದೇವೆ. ಅಲ್ಲಿ ಯಾರೂ ಕೂಡ ನೋಡಿಕೊಳ್ಳುವವರಿಲ್ಲ. ನೀವು ಹೇಳುವುದು correct. ಅಲ್ಲಿ ಮನುಷ್ಯರೂ ಕೂಡ ತಿನ್ನುವುದಕ್ಕಾಗುವುದಿಲ್ಲ. ನಾನೂ ಕೂಡ ಕಮಲಾಪುರದ ಒಂದು ಮಯೂರ guest houseಗೆ ಹೋಗಿದ್ದೆ. ನಾವು ಬಂದಾಗ ಎಲ್ಲಾ ಚೆನ್ನಾಗಿ ಮಾಡುತ್ತಾರೆ. ನಾವು ಬಂದಾಗ ಕಾಫಿ ಚೆನ್ನಾಗಿ ಮಾಡುತ್ತಾರೆ. ಟೀ ಚೆನ್ನಾಗಿ ಮಾಡುತ್ತಾರೆ, snacks ಕೊಡುತ್ತಾರೆ. ಎಲ್ಲಾ ಮಾಡುತ್ತಾರೆ. ಆದರೆ ಸಾಮಾನ್ಯ ಜನರು ಅಥವಾ ಪ್ರವಾಸಿಗರು ಹೋದಂತಹ ಸಂದರ್ಭದಲ್ಲಿ ನೀವು ಹೇಳುವುದು ಸತ್ಯ ಇದೆ. ಈ ಕಾರಣಕ್ಕೋಸ್ಕರವೇ, ನಾವು ಈಗ ಇದನ್ನು privitisation ಅಂದರೆ ಖಾಸಗಿ ಸಹಭಾಗಿತ್ವದಲ್ಲಿ, ಶುಚಿ ರುಚಿ ಮತ್ತು ಶುದ್ಧತೆಯಿಂದ ಇರತಕ್ಕಂಥ ಹೋಟೆಲನ್ನಾಗಿ ಮಾಡಬೇಕೆನ್ನುವ ಉದ್ದೇಶ ವನ್ನಿಟ್ಟುಕೊಂಡು, ಈಗಾಗಲೇ ಲೀಸ್ ಆಧಾರದ ಮೇಲೆ 18 ಹೋಟೆಲ್‌ಗಳನ್ನು

ಇಡೀ ಕರ್ನಾಟಕದಾದ್ಯಂತ ಕೊಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಮೈಸೂರಿನ ಮೆಟ್ರೋಪೋಲ್ ಹೋಟೆಲ್. ಅಲ್ಲಿ ಹಿಂದೆ ಸರ್ಕಾರ ನಡೆಸುತ್ತಿತ್ತು. ಅಲ್ಲಿ ಬಹಳ ಅಧ್ವಾನವಾಗಿದ್ದರಿಂದ, ಈಗ ಅದನ್ನು ಲೀಸ್ ಬೇಸಿಸ್ ಮೇಲೆ ಕೊಟ್ಟಿದ್ದೇವೆ. ಮಲ್ಪೆ ಬಂದರಿನಲ್ಲಿ ಪ್ಯಾರಡೈಸ್ ಐಲ್ಯಾಂಡ್ ಎಂಬ ಹೋಟೆಲೊಂದಿದೆ. ಅದನ್ನೂ ಕೂಡ ಖಾಸಗಿಯವರಿಗೆ ಕೊಟ್ಟಿದ್ದೇವೆ. ಅಂತಹ ಹೋಟೆಲ್‌ಗಳು ಈಗ ಬಹಳ ಅತ್ಯುತ್ತಮವಾಗಿ, ಚೆನ್ನಾಗಿ ನಡೆಯುತ್ತಿವೆ. ಉಳಿದಂತೆ ನೇರವಾದ complaint ಇದ್ದಂತಹ ಹೋಟೆಲ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬಹುಶಃ ನಮಗನಿಸಿದ್ದು, ಎಲ್ಲಾ ಹೋಟೆಲ್‌ಗಳನ್ನು ನಮಗೇನು ಲಾಭ ತರುತ್ತಿತ್ತೋ, ನಡೆಯುತ್ತಾ ಇದ್ದದ್ದೂ ಕೂಡ ನಷ್ಟದಲ್ಲಿ ನಡೆಯುತ್ತಿತ್ತೋ, ನಷ್ಟವನ್ನು ತುಂಬಿ, ಲಾಭವನ್ನು ಕೊಡತಕ್ಕಂಥ ಯಾವ್ಯಾವ ಮಯೂರ ಹೋಟೆಲ್‌ಗಳಿವೆಯೋ, ಅವೆಲ್ಲವನ್ನೂ ಕೂಡ ಖಾಸಗೀಕರಣ ಮಾಡುವುದರ ಮುಖಾಂತರ, ಲೀಸ್ ಮುಖಾಂತರ, ಜೊತೆಗೆ ಹೊಸದಾಗಿ ಮಾಡುತ್ತಿರತಕ್ಕಂಥ BOOT ಅಂದರೆ build, own, operate and transfer, ಈ ಆಧಾರದ ಮೇಲೆ ಕೊಟ್ಟು ಪ್ರವಾಸಿಗರಿಗೆ ಉತ್ತಮವಾದಂತಹ, ರುಚಿಯಾದಂತಹ ಮತ್ತು ಅವರಿಗೆ ಯೋಗ್ಯ ರೀತಿಯಲ್ಲಿ ಅಥವಾ ಬೆಲೆಯಲ್ಲಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ. ಮಾನ್ಯ ಸದಸ್ಯರು ಮಹಾನ್ ದೈವಭಕ್ತರು, ಮಲೆ ಮಹದೇಶ್ವರನ ಬೆಟ್ಟ ನಿಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಕೂಡ 'ಯಾತ್ರಿ ನಿವಾಸ್' ಅನ್ನು ಮಾಡಬೇಕು ಅನ್ನತಕ್ಕಂಥ ಉದ್ದೇಶವಿತ್ತು. ಆದರೆ ಈಗಾಗಲೇ ಸಾಕಷ್ಟು ಮೂಲಭೂತ ಸೌಲಭ್ಯಗಳು ಆ ಜಾಗದಲ್ಲಿ ದೊರೆಯುತ್ತಿರುವುದರಿಂದ, ಆ ಕಡೆಗೆ ನಾವು ಗಮನ ಕೊಟ್ಟಿಲ್ಲ. ಅಲ್ಲಿ 'ಯಾತ್ರಿ ನಿವಾಸ್' ಅನ್ನು ಮತ್ತೆ ಕಟ್ಟಿ, ಮತ್ತೆ ನೀವು ಇಲ್ಲಿ ಪ್ರಶ್ನೆ ಹಾಕಿದಾಗ, ಅಲ್ಲೂ ಕೂಡ ಇದೇ ಗತಿಯಾಗುತ್ತದೆ. ಅದಕ್ಕೋಸ್ಕರ ಅಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಹೋಟೆಲೊಂದನ್ನು ಮಾಡುವುದಕ್ಕೆ 'ಯಾತ್ರಿ ನಿವಾಸ್' ಅನ್ನು ಕಟ್ಟಲಿಕ್ಕೆ ನಂತರ ಅದನ್ನು maintain ಮಾಡಲಿಕ್ಕೆ ಬೇರೆಯವರಿಗೆ ಕೊಡುವಂತಹ ಪ್ರಮೇಯ ಬಂದರೂ ಬರಬಹುದು, ನೀವು ಎಲ್ಲವನ್ನೂ ಅಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತೇವೆ, ಆ ಟ್ರಸ್ಟ್‌ನವರೇ ಎಲ್ಲವನ್ನೂ ಮಾಡುತ್ತಾರೆ ಎನ್ನುವು ದಾದರೆ, ಅಲ್ಲಿ 'ಯಾತ್ರಿ ನಿವಾಸ್' ಅನ್ನು ಕಟ್ಟುವುದಕ್ಕೆ ತೊಂದರೆಯೇನೂ ಆಗುವುದಿಲ್ಲ. ಈಗಾಗಲೇ 611 ಕೋಟಿ ರೂಪಾಯಿಗಳ

ಪ್ರಸ್ತಾವನೆಯೊಂದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಮಲೆ ಮಹದೇಶ್ವರ ಬೆಟ್ಟವನ್ನೂ ಸಹ ನಾವು ಸೇರಿಸಿದ್ದೇವೆ. ಅಲ್ಲಿ 'ಯಾತ್ರಿ ನಿವಾಸ್' ಅನ್ನು ಕಟ್ಟಲಿಕ್ಕೆ ಸರ್ಕಾರ ಬದ್ಧವಾಗಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ಖಾಸಗೀಕರಣ ಮಾಡುವುದರಿಂದ ಹೆಗ್ಗಣಗಳು, ಇಲಿಗಳು ತಿನ್ನುವುದಿಲ್ಲ ಎನ್ನುವಂತಾಗು ವುದಿಲ್ಲ. ಸರ್ಕಾರ ತನ್ನ ಆಡಳಿತದಲ್ಲಿ ಬಿಗಿ ತರಬೇಕು. ಖಾಸಗೀಕರಣ ಮಾಡುವುದೊಂದು ಮೋಸ. ಕೆಲವರು ಇದನ್ನು ಲೂಟಿ ಮಾಡುವುದಕ್ಕೆ ಬಳಸಿಕೊಳ್ಳುತ್ತಾರೆ. ನೀವು ಎಲ್ಲಾ ವ್ಯವಸ್ಥೆಯನ್ನು ಮಾಡಿರುತ್ತೀರಿ, ದೊಡ್ಡ ದೊಡ್ಡ ಜಾಗ ಇಟ್ಟುಕೊಂಡಿರುತ್ತೀರಿ, ಕಟ್ಟಡ ಕಟ್ಟಿರುತ್ತೀರಿ. ಬಹಳ ಬುದ್ಧಿವಂತಿಕೆ ಉಪಯೋಗಿಸಿ, ಅದನ್ನು ಖಾಸಗೀಕರಣ ಮಾಡಲಿಕ್ಕೆ ಹೊರಟರೆ, ಅದೊಂದು ತರಹ ಲೂಟಿಯಾಗುತ್ತದೆ. ಖಾಸಗೀಕರಣದಿಂದ ಸರ್ಕಾರಕ್ಕೆ ನಷ್ಟವಾಗಬಾರದು. ಸರ್ಕಾರದ ಆಸ್ತಿಯನ್ನು ಅವರಿಗೆ ಕೊಟ್ಟು, ಅವರಿಂದಲೂ ಸರ್ಕಾರಕ್ಕೆ ನಷ್ಟವಾಗುವಂತಾಗಬಾರದು. ಆ ದೃಷ್ಟಿಯಿಂದ ಖಾಸಗೀಕರಣ ಮಾಡುವುದರಿಂದ ನಷ್ಟವೂ ಕೂಡ ಆಗುತ್ತದೆ. ಅದನ್ನೂ ಕೂಡ ತಾವು ನೋಡಬೇಕು. ಖಾಸಗೀಕರಣ ಮಾಡಿದ ನಂತರ, ಅಲ್ಲಿಗೆ ಹೋಗಿ ಅಲ್ಲಿಯ ಶುಚಿ, ರುಚಿ ಮತ್ತು ಇನ್ನಿತರ ವ್ಯವಸ್ಥೆಗಳು ಅಲ್ಲಿ ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೇ? ಎಂಬುದನ್ನು ನೋಡತಕ್ಕಂಥ ಒಡೆತನ ಅಥವಾ ಅಧಿಕಾರವನ್ನು ತಾವೇ ಇಟ್ಟುಕೊಳ್ಳುತ್ತೀರಾ?

ಶ್ರೀ ಡಿ.ಟಿ.ಜಯಕುಮಾರ್:– ಮಾನ್ಯ ಸದಸ್ಯರು ಹೇಳಿದ ಹಾಗೆ, ಖಾಸಗೀಕರಣ ಸಹಭಾಗಿತ್ವದಲ್ಲಿ ಇದನ್ನು ಮಾಡಿದರೆ, ಅವರಿಗೂ ವ್ಯಾಪಾರ ವಾಗಬೇಕು, ಸರ್ಕಾರಕ್ಕೂ ನಷ್ಟವಾಗಬಾರದು, ಎನ್ನತಕ್ಕಂಥ ದೃಷ್ಟಿಯಿಂದ ಕೆಲವೊಂದು ಷರತ್ತುಗಳನ್ನು ಹಾಕಿ ಅವರಿಗೆ ನಾವು ಕೊಟ್ಟಿರುತ್ತೇವೆ. ಅಕಸ್ಮಾತ್ ಅವರೂ ಕೂಡ ಸರಿಯಾಗಿ ನಡೆಸದಿದ್ದರೆ, ಅದನ್ನು ನಾವೇ ಕೈಗೆತ್ತಿಕೊಳ್ಳುತ್ತೇವೆ. ಅದರಲ್ಲಿ ಎರಡನೇ ಮಾತಿಲ್ಲ. ನಾವು 3 ವರ್ಷದಿಂದ 10 ವರ್ಷದವರೆಗಿನ balance sheet ತರಿಸಿ, ಅದರ average ತೆಗೆದು ಕೊಂಡು, ಆ averageನಲ್ಲಿ ಲಾಭ ಎಷ್ಟಿದೆ ಎಂಬುದನ್ನು ನೋಡುತ್ತೇವೆ. ಲಾಭ ಇದ್ದರೆ ಮಾತ್ರ ಅದನ್ನು ಖಾಸಗಿಯವರಿಗೆ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ. ಖಾಸಗಿಯವನು ತಾನೂ

ಲಾಭ ಪಡೆದುಕೊಂಡು, ಸರ್ಕಾರಕ್ಕೂ ದುಡ್ಡು ತುಂಬಿಸಬೇಕಾಗುತ್ತದೆ. ಖಾಸಗಿಯವರೂ ಸಹ ಸರಿಯಾದಂತಹ competitive rate ಕೊಟ್ಟು, ಶುಚಿ-ರುಚಿಯಾಗಿ ಮಾಡಿದರೆ ಮಾತ್ರ ಪ್ರವಾಸಿಗರು ಅಲ್ಲಿಗೆ ಹೋಗುತ್ತಾರೆ, ಇಲ್ಲದಿದ್ದರೆ ಅಲ್ಲಿಗೆ ಯಾರು ಹೋಗುತ್ತಾರೆ? ಮಾನ್ಯ ಸದಸ್ಯರು ಬಹಳ ಉತ್ತಮವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇದುವರೆಗೂ ಕೂಡ ಅದು ನಮ್ಮ ಅನುಭವಕ್ಕೆ ಬಂದಿಲ್ಲ. ಇತ್ತೀಚೆಗೆ ತಾನೇ ನಾವು ಅವರಿಗೆ hand over ಮಾಡಿದ್ದೇವೆ. ಮುಂದೆ ಆ ರೀತಿ ಏನಾದರೂ ಅವರು ನಮ್ಮ ಷರತ್ತುಗಳಿಗೆ ಒಪ್ಪಿದ್ದೂ ಅದಕ್ಕನುಗುಣವಾಗಿ ನಡೆಸುತ್ತಿಲ್ಲ ಎನ್ನುವುದಾದರೆ, ಅಂತಹವರ ಒಪ್ಪಂದವನ್ನು ಯಾವುದೇ ಸಮಯದಲ್ಲಿ ಸರ್ಕಾರ ರದ್ದು ಮಾಡತಕ್ಕಂಥ ಅವಕಾಶ ಇದೆ. ಸರ್ಕಾರ ವಿಧಿಸಿರುವ ಷರತ್ತುಗಳಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ, ಅದನ್ನು ರದ್ದು ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ. ಸರ್ಕಾರ ಅಂತಹ ಕ್ರಮವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಖಾಸಗಿಯವರಿಗೆ ವಹಿಸಿದೆ, competitive ಇರುವುದರಿಂದ, ಆ ರೀತಿಯ ಸಂದರ್ಭಗಳು ಉದ್ಭವಿಸಲಾರದು ಎಂದು ನಾನಾದರೂ ಕೂಡ ಭಾವಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಕೊಳವೆ ತೆಗೆದುಕೊಂಡು ಹೋಗುವುದಕ್ಕೆ ತೊಂದರೆ ಇದೆ ಎಂದು ತಾವು ಹೇಳಿದ್ದೀರಿ. ಎಷ್ಟು ವರ್ಷಗಳಿಂದ ಈ ತೊಂದರೆ ಇದೆ? ಬಹಳ ವರ್ಷಗಳಿಂದ ಈ ತೊಂದರೆ ಇದೆ. ಈ ತೊಂದರೆಯನ್ನು ಪರಿಹಾರ ಮಾಡಲಿಕ್ಕೆ ತಾವು ಕೇಂದ್ರ ಸರ್ಕಾರದ ಜೊತೆಗೆ ಮಾತನಾಡತಕ್ಕ ವ್ಯವಸ್ಥೆ ಆಗಬೇಕಾಗಿದೆ. ಅವರೊಡನೆ ತಾವು ತಕ್ಷಣ ಮಾತನಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ತಾವು ಮಾತನಾಡಿ, ಅವರು ಮಾನ್ಯ ಪ್ರಧಾನಮಂತ್ರಿಗಳ ಜೊತೆಗೆ ಮಾತನಾಡಿ ಅಥವಾ ಕೇಂದ್ರದ ಅರಣ್ಯ ಇಲಾಖೆ ಜೊತೆಗೆ ಮಾತನಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಯಾವ ರೀತಿ ಮಾತನಾಡಬೇಕಾದರೂ ಬಹಳ ಬೇಗ ಇದನ್ನು ಮುಗಿಸತಕ್ಕ ರೀತಿಯಲ್ಲಿ ಅದು ಆಗಬೇಕು. ಇಲ್ಲಿಗೆ ನೀರು ಕೊಡುತ್ತೇವೆ ಎಂದು ಹೇಳಿ, ಹತ್ತಾರು ವರ್ಷಗಳ ಕಾಲ ನೀರನ್ನು ಕೊಡದಿರತಕ್ಕದ್ದು ಸರಿಯಲ್ಲ. ಎರಡನೆಯದಾಗಿ, ಕಾಡುಗಳ್ಳ ಮತ್ತು ನರಹಂತಕ ವೀರಪ್ಪನ್ ಇದ್ದದ್ದರಿಂದ ಅಲ್ಲಿ ಗಣಿಗಾರಿಕೆ ಮಾಡಬಾರದು ಎಂಬ ನಿರ್ಬಂಧ ಇತ್ತು. ಈಗ ಅಲ್ಲಿ ಗಣಿಗಾರಿಕೆ ಮಾಡವುದಕ್ಕೆ ಸರ್ಕಾರ ಅನುಮತಿ ನೀಡುತ್ತದೆ ಎಂದು ಎಲ್ಲೋ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು

ಹೇಳಿದ್ದಾರೆ. ಅಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವುದರಿಂದ, ಅದರ ಪಾವಿತ್ರ್ಯತೆ ಹಾಳಾಗುತ್ತದೆ. 'ಏಳು ಮಲೈ, ಎಪ್ಪತ್ತೇಳು ಮಲೈ ಮಹದೇಶ್ವರನಿಗೆ ಉಫೇ' ಎಂಬ ಮಾತು ಅಲ್ಲಿದೆ. ಅಲ್ಲಿಯ ಎಲ್ಲಾ ಮಲೆಗಳನ್ನೂ ಒಡೆದು, ಅಲ್ಲಿ ಗಣಿಗಾರಿಕೆ ಮಾಡುವುದರಿಂದ, ತೀವ್ರವಾಗಿ ಮೂಲಭೂತವಾಗಿ ಆ ದೇವಸ್ಥಾನದ ಏನು ಚಾರಿತ್ರತೆ ಇದೆಯೋ, ಅದಕ್ಕೆ ಅಪಚಾರವಾಗುತ್ತದೆ. ಅಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಬೇಕು ಮತ್ತು ಕೊಳವೆಯನ್ನು ಬೇಗ ಹಾಕತಕ್ಕ ವ್ಯವಸ್ಥೆಯನ್ನು ಯಾವಾಗ ಮಾಡುತ್ತೀರಿ? ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ KUWSSB ಅಂದರೆ Karnataka Urban Water Supply and Sewerage Board ವತಿಯಿಂದ ಅಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ಆ ಪೈಕಿ ಈಗಾಗಲೇ ಅಲ್ಲಿ ಶುದ್ಧೀಕರಣ ಕಾರ್ಯಾಗಾರ ಪ್ರಾರಂಭವಾಗಿದೆ. ಅಲ್ಲಿ over head tank ಕಾಮಗಾರಿ ಕೂಡ ಮುಗಿಯುತ್ತಾ ಬಂದಿದೆ. ಆದರೆ ಅಲ್ಲಿ ಪೈಪ್‌ಲೈನ್ ಹಾಕುವಂತಹ ಸಂದರ್ಭದಲ್ಲಿ, ವನ್ಯ ಜೀವಿ ಸಂರಕ್ಷಣೆ ಮತ್ತು ನಮ್ಮ Reserve Forest ಈ ಇಲಾಖೆಯವರು, ಅಲ್ಲಿ ಅಡ್ಡ ಬಂದಿದ್ದಾರೆ. ಬಹುಶಃ ಆಗ ಅದು ಇರಲಿಲ್ಲ. ಆ ಯೋಜನೆ ತಯಾರು ಮಾಡುವಂತಹ ಸಂದರ್ಭದಲ್ಲಿ ಈ ಒಂದು ಅಡಚಣೆ ಇರಲಿಲ್ಲ. ಈಗ reserve forestನವರು ಮತ್ತು ವನ್ಯ ಜೀವಿ ಸಂರಕ್ಷಣೆಯವರು ಅಡಚಣೆ ತಂದಿರುವುದರಿಂದ, ಅದು ನೆನಗುದಿಗೆ ಬಿದ್ದಿದೆ. Pipeline ಮತ್ತು jackwell ಇವೆರಡನ್ನೂ ಮಾಡಿದರೆ, ಬಹುಶಃ ಅಲ್ಲಿಗೆ ಆದಷ್ಟು ಬೇಗನೆ ನೀರಿನ ಸೌಲಭ್ಯವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಬಹುಶಃ ಮುಂದಿನ 15 ದಿನಗಳಲ್ಲಿ ಮಾನ್ಯ ನಾಗರಾಜ್‌ರವರನ್ನೂ ಕೂಡ ಕರೆಸಿ, ಡಿ.ಸಿ.ಯವರನ್ನು ಕರೆಸಿ, forest officers ಅನ್ನೂ ಸಹ ಕರೆಸಿ, ಅಲ್ಲಿ ಏನೊಂದು ಅಡಚಣೆ ಇದೆಯೋ, ಅದನ್ನು ನಿವಾರಣೆ ಮಾಡಿ, ಅಲ್ಲಿ ಕಾಮಗಾರಿ ಪ್ರಾರಂಭ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಜೊತೆಗೆ, ಮಾನ್ಯ ಉಪಾಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ತಿರುಪತಿ ದೇವಸ್ಥಾನಕ್ಕೆ ಬರತಕ್ಕಂಥ ಆದಾಯ ಬಿಟ್ಟರೆ, ಎರಡನೇ ಅತಿ ದೊಡ್ಡ ಆದಾಯ ಮಲೆ ಮಹದೇಶ್ವರ ದೇವಸ್ಥಾನದಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿತ್ತು. ಇದರಿಂದ ಮುಜರಾಯಿ ಇಲಾಖೆಗೆ ಒಳ್ಳೆಯ ಹಣ

ಬರುತ್ತಿತ್ತು. ವೀರಪ್ಪನ್ ಕಾಟದಿಂದ ಆ ಸ್ಥಳಕ್ಕೆ ಪ್ರವಾಸಿಗರು ಹೆಚ್ಚು ಬರುವುದು ತಪ್ಪಿ ಮತ್ತು ಭಕ್ತಾದಿಗಳು ಕಡಿಮೆ ಬರುತ್ತಿದ್ದುದರಿಂದ ನಮಗೆ ಅಲ್ಲಿಂದ ಬರತಕ್ಕಂಥ ಆದಾಯ ಕೂಡ ಕಡಿಮೆಯಾಗಿತ್ತು. ಈಗ ಭಗವಂತನ ಕೃಪೆಯಿಂದ ವೀರಪ್ಪನ್‌ನ ಕಾಟ ತಪ್ಪಿದೆ. ಇದರಿಂದಾಗಿ ಮುಂದೆ ಅಲ್ಲಿ ಪ್ರವಾಸಿಗರು ಜಾಸ್ತಿಯಾಗುತ್ತಾರೆ. ಅಲ್ಲಿ ಮೂಲಭೂತ ಸೌಲಭ್ಯಗಳಿಗೇನಾದರೂ ಕೊರತೆ ಇದ್ದರೆ, ಅದನ್ನು ಸರಿಪಡಿಸಲಿಕ್ಕೆ ಸರ್ಕಾರ ಬದ್ಧವಾಗಿದೆ. ಅದನ್ನು ಖಂಡಿತ ಮಾಡುತ್ತೇವೆ. ಇನ್ನು ಮಾನ್ಯ ಸಚಿವರು ಗಣಿಗಾರಿಕೆ ಬಗ್ಗೆ ಹೇಳಿದ್ದಾರೆ. ಗಣಿಗಾರಿಕೆ ನನ್ನ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ, ಅದು ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳಿ, ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ತಂದು, ಅದರ ಬಗ್ಗೆ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ ಎಂಬ ವಿಚಾರವನ್ನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ನಾನು ಹೇಳಲಿಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:– ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಪ್ರಶ್ನೆಗಳು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ):– ಮಾನ್ಯ ಉಪಾಧ್ಯಕ್ಷರೆ, ದಿನಾಂಕ 4ನೇ ಜುಲೈ 2005ರ 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 200 ಪ್ರಶ್ನೆಗಳ ಪೈಕಿ 157 ಪ್ರಶ್ನೆಗಳಿಗೆ ಉತ್ತರಗಳನ್ನು ಸದನ ಗಳನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:– ಮಂಡಿಸಲಾಯಿತು.

ಪ್ರಕಟಣೆ

ಉಪಾಧ್ಯಕ್ಷರು:– ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್, ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು, ಈ ದಿನ ಮಧ್ಯಾಹ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರು ತ್ತಾರೆ. ಸದರಿ ಭೋಜನಕೂಟದಲ್ಲಿ ತಾವುಗಳೆಲ್ಲರೂ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಿದೆ.